ಈ ಎಂಟು ವರ್ಷಗಳಲ್ಲಿ ಏನೆಲ್ಲ ಬದಲಾಗಿತ್ತು! ನಾನು ಬಿ.ಇ. ಮುಗಿಸಿ ರವಿಯ ಕಾರ್ಖಾನೆಗೇ ಆಫೀಸರ್ ಹುದ್ದೆ ಹಿಡಿದು ಬಂದಿದ್ದೆ. ಅವನ ಜೊತೆಯ ರಾಜು ಸಂಜೆ ಕಾಲೇಜಿನಲ್ಲಿ ಡಿಗ್ರಿ ಮುಗಿಸಿ ಆದಾಗಲೇ ಖಾಸಗಿ ಕಂಪನಿಯೊಂದರಲ್ಲಿ ಮೂರೂವರೆ ಸಾವಿರ ಎಣಿಸುತ್ತಿದ್ದ. ಸುಂದರ 'ಸಾಫ್ಟ್‌ವೇರ್ ಫರ್ಮ್' ಅಂತೇನೋ ತೆಗೆದು ತರಾತುರಿಯಲ್ಲಿ ಓಡಾಡುತ್ತಿದ್ದ. ಕಡೆಗೆ ಏನೋ ಕವನ ಬರೆದುಕೊಂಡು ಬೀದಿ ಅಲೆಯುತ್ತಿದ್ದ. ಇವನ ಕುರುಚಲು ಗಡ್ಡದ ಗೆಳೆಯ ಕೂಡ ಇತ್ತೀಚೆಗೆ ಕವಿಗೋಷ್ಠಿ, ವಿಚಾರಗೋಷ್ಠಿ ಅದೂ ಇದೂ ಅಂತ ಹೆಸರು ಮಾಡಿ ಯಾವುದೋ ಪತ್ರಿಕೆಗೆ ಸಂಪಾದಕನಾಗಿ ತುತ್ತೂರಿ ಊದುತ್ತಿದ್ದ. ಇವನ ಜೊತೆಯ ಎಷ್ಟೊ ಜನರಾಗಲೇ ಡಿಪಾರ್ಟ್‌ಮೆಂಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೆಲವರಾಗಲೇ ಆಫೀಸರ್ಸ್ ಗ್ರೇಡ್‌ಗೂ ನೆಗೆದಿದ್ದರು. ರವಿ ಮಾತ್ರ ಸ್ಥಿತಪ್ರಜ್ಞ, ಎಂಟು ವರ್ಷಗಳ ಹಿಂದೆ ಇದ್ದಂತೆಯೇ ಇಂದೂ ಇದ್ದಾನೆ. ಮಧ್ಯೆ ಒಂದು ಟೈಮ್‌ಸ್ಕೇಲ್ ಬಡ್ತಿ ಬಂದಿದೆ. ಇನ್ನೂ ಇವನು ಆಫೀಸರ್ ಹಂತಕ್ಕೆ ಬರಲು ಮೂರು–ನಾಲ್ಕು ಮೆಟ್ಟಿಲಾದರೂ ಏರಬೇಕು. ಅಷ್ಟರಲ್ಲೇ ಇವನು ನಿವೃತ್ತನಾದರೂ ಆಶ್ಚರ್ಯವಿಲ್ಲ. ವರ್ಷಕ್ಕೊಮ್ಮೆ ಬರೋ ಅರವತ್ತು ರೂಪಾಯಿಗಳ ಸಂಬಳದ ಏರಿಕೆಯಲ್ಲಿ ಪರಮತೃಪ್ತ. ಆಚಿನ ಆಸೆಗಳಿಲ್ಲ, ಮಹತ್ವಾಕಾಂಕ್ಷೆಗಳಿಲ್ಲ, ಕನಸುಗಳಿಲ್ಲ, ಅವುಗಳ ನನಸಾಗಿಸುವ ಒದ್ದಾಟಗಳಿಲ್ಲ. ಸ್ಪರ್ಧೆಯ ವೇಗವಿಲ್ಲ, ಗೆಲುವಿನ ಉದ್ವೇಗವಿಲ್ಲ – ನಿಧಾನದ ಮಂದಗತಿಯ ಬದುಕು ಎಂಥ ನಿಶ್ಚಿಂತ ಜೀವನ ಇವನದು! ಏಳುವುದು, ತಿನ್ನುವುದು, ಕೆಲಸಕ್ಕೆ ಹೋಗುವುದು, ಸಂಜೆ ನನ್ನ ಜೊತೆ, ಇಲ್ಲ ಒಂದಷ್ಟು ಸೋಮಾರಿಕಟ್ಟೆಯ ಗೆಳೆಯರೊಡನೆ ಹರಟುವುದು, ರಾತ್ರಿ ಮೆಸ್ಸಿನಲ್ಲಿ ಊಟ ಮತ್ತೆ ನಿದ್ರೆ – ಬದುಕಿನ ಒಂದು ದಿನ ಕಳೆದೇ ಹೋಯಿತು. ಇನ್ನುಳಿದವೂ ಯಾವೊಂದು ವ್ಯತ್ಯಾಸವಿಲ್ಲದೆ ಕಾರ್ಖಾನೆಯಿಂದ ಹೊರ ಬಂದು ಒಂದೇ ಮಾದರಿಯ ಪುನರಾವರ್ತನೆಯಾಗಿ ಕಳೆದು ಹೋಗುತ್ತವೆ. ಅಪ್ಪ ಬಿಟ್ಟಿದ್ದ ಹಣದಲ್ಲಿ ಒಂದು ಮನೆ ಕೊಂಡಿದ್ದಾನೆ. ದೊಡ್ಡದೇನಲ್ಲ 25X30 ಸೈಟಿನಲ್ಲಿ ತುರುಕಿ ಕಟ್ಟಿದ ಒಂದು ಕೋಣೆಯ ಮನೆ. ಸಾಕು ನಡೆದೀತು. ನನ್ನ ಮದುವೆ ಅವನ ಬದುಕಿಗೊಂದಿಷ್ಟು ವ್ಯತ್ಯಾಸ ತರಬಹುದು. ಮೆಸ್ಸಿಗೆ ಬದಲು ಅಡಿಗೆ ಮನೆಯಲ್ಲಿ ಗ್ಯಾಸ್ ಹಚ್ಚಬಹುದು. ರಾತ್ರಿ ಒಂಟಿ ಹಾಸಿಗೆ ಹಿಗ್ಗಬಹುದು. ಒಂದೆರಡು ಮಕ್ಕಳಾಗಬಹುದು– ಇಷ್ಟೇ– ಇಷ್ಟೇನೇ? ದಿನ ಬೆಳಗೂ ನನ್ನ–ಅವನ ಸಂಬಂಧ ವಿರುದ್ಧ ದಿಕ್ಕುಗಳಲ್ಲಿ ತಿರುಗಿ ತಿರುಗಿ ಸವೆಯುತ್ತವೆ.

ಏಕೋ ಎಂದೂ ಇಲ್ಲದಷ್ಟು ರವಿಯ ಬಗೆಗೆ ಜುಗುಪ್ಸೆ ಮೂಡುತ್ತಿದೆ.

ನನ್ನೆದುರು ನನ್ನ ಸಹೋದ್ಯೋಗಿಗಳು ಸ್ನೇಹಿತರು ಸಾಲು ಸಾಲಾಗಿ ನಿಲ್ಲುತ್ತಾರೆ. ಏನಾದರೂ ನೆಪ ಹುಡುಕಿ ಮಾತನಾಡಿಸಲು ಬರುವ ರಮೇಶ್, ನನ್ನ ಸಂಗಾತಿಯಾಗಲು ಹಾತೊರೆದಿದ್ದ ಸಹಪಾಠಿ ವಿಜಯ್, ಪಿಎಚ್.ಡಿ. ಮಾಡಿ ಅಮೆರಿಕೆಗೆ ಹೋಗಲಿರುವ ಅಣ್ಣನ ಗೆಳೆಯ... ಇನ್ನೂ ಯಾರ್‍ಯಾರೋ!

ನನಗೇ ಒಮ್ಮೊಮ್ಮೆ ಅಳುಕಾಗುತ್ತದೆ. ನನ್ನ ಬತ್ತುತ್ತಿರುವ ಪ್ರೇಮದ ಬಗ್ಗೆ ಅಪರಾಧಿ ಪ್ರಜ್ಞೆ ತುಂಬಿ ನಿಲ್ಲುತ್ತದೆ. ಅವನ ತುಂಬಾ ತುಂಬಿದ್ದ ನನ್ನ ಪ್ರೀತಿಯ ಕೊಡ ಬದುಕಿನೆಲ್ಲ ಏರು ತಗ್ಗುಗಳಲ್ಲಿ ಕುಲುಕಿ ಕುಲುಕಿ ತುಳುಕಿ ತುಳುಕಿ ಖಾಲಿಯಾಗಿದೆಯಲ್ಲ ಎಂದು ಪರಿತಪಿಸುತ್ತೇನೆ. ರವಿಗೆ ನಿಷ್ಠಳಾಗಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಚಂದದ ಹುಡುಗರ ಕೈ ಹಿಡಿದ ಗೆಳತಿಯರನ್ನು ಮರೆಯಲು ಯತ್ನಿಸುತ್ತೇನೆ. ರವಿಯ ಒಳ್ಳೆಯತನಗಳ ಪಟ್ಟಿ ಇಳಿಸುತ್ತೇನೆ. ಅವಕ್ಕೆ ನಾನು ಕುರುಡಾಗುವುದು ಬೇಡ ಅಂದುಕೊಳ್ಳುತ್ತೇನೆ. ಅಮ್ಮ 'ಹುಡುಗಿಯರಿಗೇಕೆ